**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 07-11-2023.</u>**

**<u>ಪಾಟೀ ಸವಾಲುಃ ಪ್ರತಿವಾದಿ ನಂ.1 ರ ಪರ ಶ್ರೀ.ಆರ್ ಆರ್ ಕೆ ವಕೀಲರಿಂದಃ</u>**

1. ಮಲ್ಲಪ್ಪ ನನ್ನ ತಂದೆ ಹಾಗೂ ಯಲ್ಲಮ್ಮ ನನ್ನ ತಾಯಿ. ನಮ್ಮ ತಂದೆ ತಾಯಿಗೆ ನಾನು ಹಿರಿಯ ಮಗ ಹಾಗು ವಾದಿ ನಂ.1 ಕಿರಿಯ ಮಗ. ನಮ್ಮ ತಂದೆ ತಾಯಿಗೆ ನಾವು 6 ಜನ ಮಕ್ಕಳು. ನಮ್ಮ ತಂದೆಗೆ ಮೂರು ಜನ ಸಹೋದರರು ಅವರು ರುದ್ರಪ್ಪಾ, ವಿಠ್ಠಲ ಹಾಗೂ ಬಾಬು. ರುದ್ರಪ್ಪ ಹಾಗೂ ಅವರ ಹೆಂಡತಿ ತೀರಿಕೊಂಡಿದ್ದಾರೆ ಅವರಿಗೆ ಜಯಶ್ರೀ, ಅನಿತಾ, ಸುಧೀರ ಮತ್ತು ದಂಯಾನಂದ ಮಕ್ಕಳು. ಈ ದಾವೆಯಲ್ಲಿ ತಕರಾರು ಸಲ್ಲಿಸಲು ನಾನು ಮಾಹಿತಿಯನ್ನು ಕೊಟ್ಟಿದ್ದೆನೆ. ನಾನು M.Com. ಪದವಿಧರ. ನಿಮ್ಮ ಮನೆತನದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ನೀವು ಮಾಡಿದ್ದಿರಿ ಎಂದರೆ ಸಾಕ್ಷಿಯು ನನ್ನ ತಮ್ಮ ಎಲ್ ಎಲ್ ಬಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಸುಮಾರು 30 ವರ್ಷಗಳಿಂದ Tax consultant ಆಗಿ ವೃತ್ತಿ ಮಾಡುತ್ತಿದ್ದೆನೆ ಆದ್ದರಿಂದ ನಾನು Tax consultant ಎಂದು ಹೇಳುತ್ತಿದ್ದೆನೆ. Tax consultant ಆಗಿ ಕೆಲಸ ಮಾಡಬೇಕಾದರೆ Commissioner of Income Tax and Commissioner of commercial Tax ರವರ ಬಳಿ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ಕೇವಲ ವೃತ್ತಿ ಮಾಡುವುದಾದರೆ ಬೇಕಾಗುವುದಿಲ್ಲ, ಕಮಿಷನರ ಮುಂದೆ ವಾದ ಮಂಡಿಸಲು ಬೇಕಾಗುತ್ತದೆ ಎಂದು ಹೇಳುತ್ತಾರೆ. Tax consultant ಆಗಿ ನೊಂದಣಿ ಮಾಡಿಕೊಳ್ಳುವುದಾದರೆ ಯಾವ procedure follow ಮಾಡಬೇಕು ಅದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನಾನು

ಕೇವಲ ವೃತ್ತಿ ಮಾಡುತ್ತೇನೆ ಆದ್ದರಿಂದ ಸದರಿ procedure ಬೇಕಾಗಿಲ್ಲ ಎಂದು ಹೇಳುತ್ತಾರೆ. Tax consultant ಆಗಿ ಕೆಲಸ ಮಾಡಲು ನಾವು ಕಮೀಷನರ ಬಳಿ ಅರ್ಜಿ ಸಲ್ಲಿಸಬೇಕಾಗುತ್ತದೆ ಅವರು ನಮಗೆ ನಮ್ಮ ಅರ್ಜಿ ವಿಚಾರಣೆ ಮಾಡಲು ಸಂದರ್ಶನ ಮಾಡುತ್ತಾರೆ ಎಂದರೆ ಸರಿಯಲ್ಲ. ಸಂದರ್ಶನದಲ್ಲಿ ಕಮಿಷನರ ರವರು ನಮಗೆ ಕಾಯ್ದೆ ಬಗ್ಗೆ ಗೊತ್ತಿದೆ ಇಲ್ಲ ಎಂದು ತಿಳಿದುಕೊಂಡು ನಂತರ ಪರವಾನಿಗೆ ಪತ್ರ ಕೊಡುತ್ತಾರೆ ಎಂದರೆ ಸಾಕ್ಷಿಯು ನಾನು ವಕೀಲನಾಗಿ ಕೆಲಸ ಮಾಡುತ್ತಿಲ್ಲ ಕೇವಲ ವೃತ್ತಿ (Service) ಮಾಡುತ್ತೇನೆ ಎಂದು ಹೇಳುತ್ತಾರೆ. Tax consultant ಆಗಿ ಕೆಲಸ ಮಾಡಲು ಪರವಾನಿಗೆ ಪಡೆದು ನಂತರ ನಾನು Tax consultant ಎಂದು ನನ್ನ ಹೆಸರಿನ ಮುಂದೆ ಬರೆದುಕೊಳ್ಳಬಹುದು ಎಂದರೆ ನಿಜ. ಸಾಕ್ಷಿಯು ನನಗೆ ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ಪರವಾನಿಗೆ ಪಡೆಯದೆ Tax consultant ಆಗಿ ಕಾನೂನುಬಾಹಿರವಾಗಿ ನಾನು ನನ್ನ ಬೋರ್ಡ ಹಾಕಿಕೊಂಡಿದ್ದೆನೆ ಎಂದರೆ ಸರಿಯಲ್ಲ. Accountant ಇದ್ದೆನೆ ಎಂದು ತೋರಿಸಲು ದಾಖಲೆ ಬೇಕಾಗಿಲ್ಲ.

2. 1978 ರಲ್ಲಿ ನನ್ನ ಎಸ್ ಎಸ್ ಎಲ್ ಸಿ ಮುಗಿಸಿದ್ದೆನೆ. ನಾನು ಪಿಯುಸಿ ವಿದ್ಯಾಬ್ಯಾಸ ಮಾಡಲು ಹುಬ್ಬಳ್ಳಿಗೆ ಹೋಗಿದ್ದೆನೆ. ನಂತರ ಬಿಕಾಮ್ ಸಹ ಅಲ್ಲೆ ಮುಗಿಸಿದ್ದೆನೆ. ನಾನು 1985 ರಲ್ಲಿ ನನ್ನ ಬಿ.ಕಾಮ್ ಪದವಿ ಪಡೆದಿದ್ದೆನೆ. ನಂತರ External ಆಗಿ M.com ಪದವಿ ಪಡೆದಿದ್ದೆನೆ. ಯಾವ ವರ್ಷದಲ್ಲಿ M.com ಪದವಿ ಪಡೆದಿದ್ದೆನೆ ಎಂದು ಈಗ ನೆನಪಿಲ್ಲ. ನಾನು ಹುಬ್ಬಳ್ಳಿಯಲ್ಲಿ ಓದುತ್ತಿದ್ದಾಗ ಹಬ್ಬಗಳ ಸಮಯದಲ್ಲಿ ನಮ್ಮ ಊರಿಗೆ

ಬರುತ್ತಿದ್ದೆ. ನಾನು Tax consultant ಆಗಿ ವೃತ್ತಿಯನ್ನು ಸುಮಾರು 1988 ರಿಂದ ಪ್ರಾರಂಭ ಮಾಡಿದ್ದೆನೆ. ನಾನು ಅಂಗಡಿಗಳಲ್ಲಿ Account ಬರೆಯಲು ಹೋಗುತ್ತಿದ್ದೆ. ನಾನು Account ಗಳನ್ನು ವ್ಯವಹಾರಗಳ ಆಧಾರದ ಮೇರೆಗೆ ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಹೋಗುತ್ತಿದ್ದೆ. ನನಗೆ ತಿಂಗಳಿಗೆ account ಬರೆದಾಗ Turn over ಆಧಾರದ ಮೇರೆಗೆ ತಿಂಗಳಿಗೆ ರೂ.150 ರಿಂದ 500 ರೂಪಾಯಿಗಳ ವರೆಗೆ ಕೊಡುತ್ತಿದ್ದರು. Account ಗಳನ್ನು ಬರೆಯಬೇಕಾದರೆ ಲಾಭ ಹಾಗೂ ನಷ್ಟಗಳನ್ನು ನಿಖರವಾಗಿ ಬರೆಯಬೇಕಾಗುತ್ತದೆ ಎಂದರೆ ನಿಜ. 1988 ರಿಂದ ಇವತ್ತಿನವರೆಗೂ ನಾನು ಎಷ್ಟು ಜನರ ಹಾಗೂ ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ ಆದರೆ ಸುಮಾರು 200 ಜನರ account ಗಳನ್ನು ಬರೆದಿದ್ದೆನೆ. ನಿಮ್ಮ ಖಾತೆಯನ್ನು ಸಹ ನಿಖರವಾಗಿ ಬರೆದಿದ್ದಿರಿ ಅಥವಾ ಇಲ್ಲ ಎಂದರೆ ಸಾಕ್ಷಿಯು ನಾನು ವ್ಯಾಪಾರ ಮಾಡುತ್ತಿರಲಿಲ್ಲ ಆದ್ದರಿಂದ ಬರೆದಿಲ್ಲ ಎಂದು ಹೇಳುತ್ತಾರೆ. ನೀವು ಗಳಿಸಿದ ಹಣ ನಿಮ್ಮ ಖರ್ಚುಗಳನ್ನು ಇಲ್ಲಿಯವರೆಗೆ ನೀವು ದಾಖಲೆಯ ರೂಪದಲ್ಲಿ ಬರೆದುಇಟ್ಟುಕೊಂಡಿಲ್ಲ, ಸಾಕ್ಷಿಯು ಅದರ ಪ್ರಮೇಯ ಬಂದಿರುವುದಿಲ್ಲ ಎಂದು ನಾನು ಮಾಡುತ್ತಿದ್ದ ವ್ಯವಹಾರ ಆದಾಯ ಹಾಗೂ ಖರ್ಚು ನನಗೆ ಸಂಬಂಧ ಪಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ. ನಾನು ಬರೆದುಕೊಡುತ್ತಿದ್ದ ಖಾತೆಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಬೇಕಾಗುತ್ತದೆ ಎಂದರೆ ನಿಜ. ಪ್ರತಿಯೊಬ್ಬ ವ್ಯಕ್ತಿ ಅಂದರೆ ಆದಾಯ ತೆರಿಗೆ ಸಲ್ಲಿಸುವ ಆದಾಯ ಇಲ್ಲದಿದ್ದರು ಸಹ (Nil income tax) ತಮ್ಮ ಆದಾಯ ತೆರಿಗೆ Returns ಸಲ್ಲಿಸಬೇಕಾಗುತ್ತದೆ ಎಂದರೆ ಸಾಕ್ಷಿಯು ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ.

ಸಾಕ್ಷಿಯು ಆದಾಯ ತೆರಿಗೆ ಯಾರು ಕಟ್ಟಬೇಕಾಗುತ್ತದೆ ಅವರು Returns ಸಲ್ಲಿಸುತ್ತಾರೆ ಎಂದು ಹೇಳುತ್ತಾರೆ. ನಾನು ಹಾಜರು ಮಾಡಿರುವ ಎರಡು ಮೂರು ವರ್ಷದ income tax returns ಬಿಟ್ಟು ಅದರ ಹಿಂದಿನ ವರ್ಷಗಳ income tax returns ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು 4 ವರ್ಷದ income tax returns ಹಾಜರು ಮಾಡಿದ್ದೆನೆ ಅದರ ಹಿಂದೆ ನನಗೆ ಅವಶ್ಯಕತೆ ಇರಲಿಲ್ಲ ಆದ್ದರಿಂದ income tax returns ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ income tax returns ಜೊತೆಯಲ್ಲಿ profit and loss account ಮತ್ತು Balance sheet ಹಾಜರು ಮಾಡಿಲ್ಲ ಎಂದರೆ ನಿಜ, ಅವಶ್ಯಕತೆ ಇದ್ದರೆ ಹಾಜರು ಮಾಡುತ್ತೇನೆ ಎಂದು ಹೇಳುತ್ತಾರೆ.

3. 1988 ರಿಂದ ಇಲ್ಲಿಯವರೆಗೆ ನನ್ನ ವೃತ್ತಿಯಿಂದ ನನಗೆ ಬಂದಿರುವ ಆದಾಯದ ಕುರಿತು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಬ್ಯಾಂಕ ಖಾತೆಯ ಪಾಸಬುಕ್ಕಗಳನ್ನು ಹಾಜರುಮಾಡಿದ್ದೆನೆ ಎಂದು ಹೇಳುತ್ತಾರೆ. ನನಗೆ ಸದರಿ ಬ್ಯಾಂಕ ಖಾತೆ ಪಾಸ್ ಬುಕ್ಕಗಳನ್ನು ನೋಡಿ ನನ್ನ ವೃತ್ತಿಯಿಂದ ಎಷ್ಟು ಆದಾಯ ಬಂದಿದೆ ಎಂದು ಹೇಳಲು ಬರುವುದಿಲ್ಲ.

4. ನಾನು ನನ್ನ ಸಾಕ್ಷಿ ವಿಚಾರಣೆಯಲ್ಲಿ Business ಮಾಡುತ್ತೇನೆ ಎಂದು ಬರೆಸಿಲ್ಲ. ಸಾಕ್ಷಿ ಮುಂದುವರೆದು ನಾನು ಲೇವಾ-ದೇವಿ ವ್ಯವಹಾರ ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ಸುಮಾರು 2012 ರಿಂದ ಲೇವಾ-ದೇವಿ ವ್ಯವಹಾರ ಮಾಡುತ್ತೇನೆ. ನೀವು

2012 ರ ನಂತರದಿಂದ ಮಾಡುತ್ತಿರುವ ಲೇವಾ-ದೇವಿ ವ್ಯವಹಾರದಲ್ಲಿ ಯಾರಿಗೆ ಎಷ್ಟು ಹಣ ಕೊಟ್ಟಿದ್ದಿರಿ ಹಾಗೂ ಎಷ್ಟು ಬಡ್ಡಿಯನ್ನು ಪಡೆದಿದ್ದಿರಿ ಎನ್ನುವ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಈ ದಾವೆ ಸಲ್ಲಿಸಿದ ನಂತರ 2012 ರಿಂದ ಸದರಿ ಲೇವಾ ದೇವಿ ವ್ಯವಹಾರ ಮಾಡುತ್ತಿದ್ದು ಹಾಜರು ಮಾಡಿಲ್ಲ ಅವಶ್ಯಕತೆ ಇದ್ದರೆ ಹಾಜರು ಮಾಡುತ್ತೇನೆ ಎಂದು ಹೇಳುತ್ತಾರೆ. ನೀವು Account ಬರೆಯಲು ಎಷ್ಟು ಗಂಟೆಗೆ ಮನೆಯಿಂದ ಹೊರಡುತ್ತಿದ್ದಿರಿ ಹಾಗೂ ಎಷ್ಟು ಗಂಟೆಗೆ ಮನೆಗೆ ಬರುತ್ತಿದ್ದಿರಿ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ವ್ಯವಹಾರಗಳ ಮೇಲೆ ಆಧಾರವಾಗಿತ್ತು ಬೆಳಿಗ್ಗೆ ಹೋಗಿ ಸಾಯಂಕಾಲ ಬರುತ್ತಿದ್ದೆ ಎಂದು ಹೇಳುತ್ತಾರೆ. ನಾನು ಬೇರೆಯವರಿಗೆ ಅವರ ಖಾತೆಗಳನ್ನು ಬರೆದು ವ್ಯವಹಾರಗಳನ್ನು ಸರಿಯಾಗಿ ಇಟ್ಟುಕೊಳ್ಳಲು ಹೇಳಿಕೊಟ್ಟು ನನ್ನ ವ್ಯವಹಾರಗಳ ಕುರಿತು ಯಾವುದೇ ದಾಖಲೆ ಇಟ್ಟಿಲ್ಲ ಎಂದರೆ ಸಾಕ್ಷಿಯು ನನ್ನ ಬಳಿ ಇದೆ ಅವಶ್ಯಕತೆ ಇದ್ದರೆ ಹಾಜರು ಮಾಡುತ್ತೇನೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**